ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **131/ 2016**

| | | |
|---|---|---|
| ಸಾಕ್ಷಿಯ ಹೆಸರುಃ | ಹರೀಶ | ಪ್ರಾಸಾಃ 2 |
| ಗಂಡನ/ತಂದೆಯ ಹೆಸರುಃ | ಅಶೋಕ ಗುತ್ತೆದಾರ | ಚಾಸಾಃ 10 |
| ವಯಸ್ಸುಃ | 44 ವರ್ಷ | ದಿಃ 18-07-2025 |
| ಉದ್ಯೋಗಃ | ವ್ಯಾಪಾರ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಗುಲ್ಬರ್ಗಾ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನನಗೆ ಚಾಸಾಃ 1 ರವರು ಹಾಗೂ 1 ನೇ ಆರೋಪಿತನು ಮಾತ್ರ ಪರಿಚಯವಿದೆ. ಸದರಿ 1 ನೇ ಆರೋಪಿತನು ಸನಃ 2010 ರಲ್ಲಿ ನಮಗೆ ಜಮೀನನ್ನು ಸ್ವಾದೀನ ನೀಡದೆ ಮಾರಾಟ ಮಾಡಿರುತ್ತಾರೆ. ಸನಃ 2013 ರಲ್ಲಿ ಆರೋಪಿತರು ನಮಗೆ ಮೋಸ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಸದರಿ ಜಮೀನು 1 ನೇ ಆರೋಪಿತನ ಹೆಸರಿನಲ್ಲಿ ಇರುವುದಿಲ್ಲ ಆದರೆ ಚಾಸಾಃ 1 ರವರ ಹೆಸರಿನಲ್ಲಿ ಇರುತ್ತದೆ ಎಂದು ತಿಳಿದುಬಂದಿರುತ್ತದೆ. ಸದರಿ ಮಾನವೀಯತೆಯ ಆಧಾರದ ಮೇಲೆ ಸನಃ 2013 ರಲ್ಲಿ ಸದರಿ ಮಾರಾಟ ಪತ್ರವನ್ನು ರದ್ದುಯಾತಿ ಮಾಡಿರುತ್ತೇವೆ. ನನಗೆ ಇಷ್ಟೇ ಗೊತ್ತಿರುತ್ತದೆ. ನಾನು ಪೊಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಖರೀದಿ ಪತ್ರಕ್ಕೆ ಪರಶುರಾಮ ಇವರು ಸಹಿ ಮಾಡಿರುತ್ತಾರೆ. ಖರೀದಿ ಕರಾರು ಪತ್ರವನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕರಾರು ರದ್ದುಯಾತಿ ಪತ್ರವನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲು ಃಆರೋಪಿ ಪರ ಶ್ರೀ. ಎ. ಎಮ್. ಜಿ. ವಕೀಲರಿಂದಃ

1. ಸದರಿ ಖರೀದಿ ವ್ಯವಹಾರವು ಪರಶುರಾಮ ಇವರ ಕಡೆಯಿಂದ ಆಗಿರುತ್ತದೆ. ಈ ಜಮೀನಿಗಿಂತ ಮುಂಚೆ ಬೇರೆ ಜಮೀನುಗಳನ್ನು ಖರೀದಿ ಮಾಡಿರುತ್ತೇವೆ. ಪರಶುರಾಮ ಹೊರತುಪಡಿಸಿ ಬೇರೆ ಯಾರೂ ಈ ವ್ಯವಹಾರದಲ್ಲಿ ಇರುವುದಿಲ್ಲ. ನಿಪಿ-2 ರ ಮಾತು-ಕತೆ ನಮ್ಮ ಕಚೇರಿಯಲ್ಲಿ ಆಗಿರುತ್ತದೆ. ಸದರಿ ಮಾತು-ಕತೆಯಲ್ಲಿ ಪರಶುರಾಮ ಇವರು ಬಂದಿರುತ್ತಾರೆ. ನಾವು ವ್ಯವಹಾರ ಮಾಡುವಾಗ ಮೂಲ

ಮಾಲೀಕರ ಜೊತೆ ಮಾತನಾಡುತ್ತೇವೆ. ಸದರಿ ಈ ಜಮೀನಿಗೆ ಸಂಬಂದಪಟ್ಟಂತೆ ಪರಶುರಾಮನ ಹೊರತುಪಡಿಸಿ ಯಾರೂ ಬಂದಿರುವುದಿಲ್ಲ. ಸದರಿ ಜಮೀನು ಖರೀದಿ ಮಾಡುವಾಗ ಮಾಲೀಕರ ಜೊತೆ ಮಾತನಾಡುತ್ತೇವೆ. ಈ ಜಮೀನು ಖರೀದಿ ಮಾಡುವಾಗ ಮೂಲ ಮಾಲೀಕರ ಜೊತೆ ಮಾತನಾಡಿರುತ್ತೇನೆ. ಬಲರಾಮ ಜೊತೆ ಮಾತನಾಡಿರುತ್ತೇನೆ ಆದರೆ ಅವರು ಕಿಶನ ಎಂದು ನನ್ನ ಜೊತೆ ಮಾತನಾಡಿರುತ್ತಾರೆ. ಸದರಿ ವ್ಯವಹಾರವಾಗುವುದಕ್ಕಿಂತ ಮುಂಚೆ 15 ಮುಂಚೆ ಮಾತನಾಡಿರುತ್ತೇವೆ. ಸದರಿ ಸಮ್ಮತಿ ಸಾಕ್ಷಿದಾರರು ಆರೋಪಿತನ ಹೆಂಡತಿ ಮತ್ತು ಮಗ ಇದ್ದರು. ಸದರಿ ಕಿಶನ ಇವರು ನಮಗೆ ಜಮಿನಿನ ಮೋಸ ಆದ ನಂತರ ಗೊತ್ತಾಗಿರುತ್ತದೆ. ಜಮೀನು ಖರೀದಿ ಮಾಡುವಾಗ ಹಿಂದಿನ ಪಹಣಿ ಪತ್ರಗಳನ್ನು ನೋಡಿರುತ್ತೇನೆ. ನಾನು ಪಹಣಿ ಪತ್ರಿಕೆಗಳು ನೋಡಿರುವುದಿಲ್ಲ ಆದರೆ ನಮ್ಮ ವಕೀಲರು ನೋಡಿರುತ್ತಾರೆ. ವಕೀಲರು ನೀಡಿರುವ ಅಭಿಪ್ರಾಯವನ್ನು ನೋಡಿರುತ್ತೇನೆ. ಸದರಿ ಅಭಿಪ್ರಾಯವನ್ನು ನಿಖರವಾಗಿ ನೋಡಿರುವುದಿಲ್ಲ. ಕಿಶನಗೆ ಯಾವ ರೀತಿ, ಯಾವ ವರ್ಷ ಬಂದಿರುತ್ತದೆ ಎಂದು ನಾನು ನೋಡಿರುವುದಿಲ್ಲ.

2. ನಾನು ಜಮೀನನ್ನು ನೋಡಿರುತ್ತೇನೆ. ಸದರಿ ಖರೀದಿ ಜಮೀನು ಚಾಮನಳ್ಳಿ ತಾಂಡಾ ಮುಖ್ಯ ರಸ್ತೆಗೆ ಬರುತ್ತದೆ. ಖರೀದಿ ಜಮಿನಿನ ಚಕಬಂದಿ ಹೇಳಲು ಬರುವುದಿಲ್ಲ ಮತ್ತು ನಾನು ಅಕ್ಕ-ಪಕ್ಕದವರ ವಿಚಾರಣೆ ಮಾಡಿರುವುದಿಲ್ಲ. ಈ ಖರೀದಿ ಜಮಿನಿಗಿಂತ ಮುಂಚೆ ಬೇರೆ ಜಮೀನುಗಳ ವ್ಯವಹಾರವನ್ನು ಮಾಡಿರುತ್ತೇನೆ. ಚಾಮನಳ್ಳಿ ತಾಂಡಾದಲ್ಲಿ ಪರಶುರಾಮ ಇವರನ್ನು ಹೊತುಪಡಿಸಿ ಬೇರೆ ಯಾರೂ ಪರಿಚಯವಿಲ್ಲ. ಸದರಿ ನಿಪಿ-2 ನ್ನು ಮಾಡಲು ಯಾರಿಗೆ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಿಪಿ-2 ನ್ನು ನಮ್ಮ ಮ್ಯಾನೇಜರ ಮಾಡಿರುತ್ತಾರೆ. ನಿಪಿ-2 ಯಾವ ವಕೀಲರು ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಜನ ಸಾಕ್ಷಿದಾರರು ಇರುತ್ತಾರೆ ಎಂದರೆ ಸಾಕ್ಷಿಯು ಪರಶುರಾಮ, ಶೇಷಾದ್ರಿ ಇವರ ಹೆಸರು ಮಾತ್ರ ನೆನಪಿರುತ್ತದೆ. ನನಗೆ ಶೇಷಾದ್ರಿ ಇವರ ಪರಿಚಯವಿದೆ. ಸುಭಾಷ ಗುತ್ತೆದಾರ ಇವರ ಪರಿಚಯವಿದೆ. ಶೇಷಾದ್ರಿ ಇವರು ಯಾದಗಿರಿ ಮತ್ತು ಸುಭಾಷ ತಂದೆ ಮರಿಯಪ್ಪ ಅಲ್ಲಿಪೂರ ಇವರು ನನ್ನ ಸಂಬಂಧಿಕರು ಎಂದರೆ ಸಾಕ್ಷಿಯು ನಮ್ಮ ಕುಲಕ್ಕೆ ಸೇರಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಶೇಷಾದ್ರಿ ಮತ್ತು ಸುಭಾಷ ಇವರು ನಾವು ಖರೀದಿ ಮಾಡುವ ಎಲ್ಲಾ ಜಮಿನಿನಲ್ಲಿ ಸಾಕ್ಷಿದಾರರು ಇರುತ್ತಾರೆ.

3. ಚಾಸಾಃ 1 ರವರು ಸಹಿ ಮಾಡುತ್ತಾರಾ ಅಥವಾ ಹೆಬ್ಬೆಟ್ಟು ಮಾಡುತ್ತಾರಾ? ಎಂದರೆ ನನಗೆ ನೆನಪಿಲ್ಲ. ನಿಪಿ-2 ಕ್ಕೆ ನಾನೇ ಮೊದಲು ಸಹಿ ಹಾಕಿರುತ್ತೇನೆ. ಸದರಿ ಉಳಿದವರು ನನ್ನ ಸಮಕ್ಷಮದಲ್ಲಿ

ಸಹಿ ಹಾಕಿರುತ್ತಾರೆ. ಸಾಕ್ಷಿದಾರರಲ್ಲಿ ಯಾರು ಸಹಿ ಮಾಡುತ್ತಾರೆ ಮತ್ತು ಹೆಬ್ಬೆಟ್ಟು ಹಾಕಿರುತ್ತಾರೆ ಎಂದರೆ ನನಗೆ ನೆನಪು ಇಲ್ಲ. ನಾವು ಖರೀದಿ ಮಾಡುವಾಗ ಮಾರಾಟಗಾರನ ಆಧಾರ ಕಾರ್ಡ ಮತ್ತು ಮತದಾರ ಕಾರ್ಡ ಪಡೆದುಕೊಳ್ಳುತ್ತೇವೆ ಎಂದರೆ ಸಾಕ್ಷಿಯು ವಕೀಲರು ಮಾಡುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಪತ್ರ ಮಾಡುವ ವಕೀಲರು ತೆಗೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಕೀಲರ ಹೆಸರು ನನಗೆ ಗೊತ್ತಿಲ್ಲ. ನನಗೆ ಮೋಸ ಆಗಿದ್ದರ ಬಗ್ಗೆ ಸನಃ 2012-13 ರಲ್ಲಿ ಗೊತ್ತಾಗಿರುತ್ತದೆ. ಯಾವ ತಿಂಗಳಲ್ಲಿ ಗೊತ್ತಾಗಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ಈ ಪ್ರಕರಣ ದಾಖಲಾಗುವುದಕ್ಕಿಂತ 2-3 ತಿಂಗಳ ಮುಂಚೆ ಮೋಸ ಮಾಡಿದ್ದರ ಬಗ್ಗೆ ಗೊತ್ತಾಗಿರುತ್ತದೆ. ಚಾಸಾಃ 1 ರವರು ಬಂದು ಭೇಟಿಯಾಗಿ ತಿಳಿಸಿರುತ್ತಾರೆ. ಈ ಪ್ರಕರಣ ಯಾವಾಗ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ನಿಪಿ-3 ನ್ನು 1 ನೇ ಆರೋಪಿತನ ಕಡೆಯಿಂದ ಬಲರಾಮ ಎಂದು ತಿಳಿಸಿ ಕಿಶನ ಎಂದು ಹೆಸರಿನಿಂದ ಮಾಡಿಕೊಟ್ಟಿರುತ್ತಾರೆ. ನಿಪಿ-3 ನ್ನು ಮಾಡುವಾಗ ಬಲರಾಮ ಈತನು ಕಿಶನ ಇರುತ್ತಾನೆ ಎಂದು ನಿಪಿ-2 ನ್ನು ಮಾಡಿದ ನಂತರ ಗೊತ್ತಾಗಿರುತ್ತದೆ. ನಿಪಿ-3 ಆದ ಬಗ್ಗೆ ಚಾಸಾಃ 1 ರವರಿಗೆ ಮಾಹಿತಿ ಇದ್ದಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3 ನ್ನು ವಕೀಲರು ತಯಾರಿಸಿರುತ್ತಾರೆ. ಖರೀದಿ ಜಮೀನಿನ ಬಗ್ಗೆ ವಿವಾದ ಇರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ.

5. 1 ನೇ ಆರೋಪಿತನು ಮೋಸದಿಂದ ಕಿಶನ ಎಂದು ಹೇಳಿ ನಿಪಿ-2 ನ್ನು ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾಃ 1 ರವರು ಒಟ್ಟಾಗಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ